# ಅಧ್ಯಾಯ 4

ಶ್ರೀ ಗಣೇಶಾಯ ನಮಃ    ಸದ್ಗುರು ಸಿದ್ಧಾರೂಢ ನಮಃ



ಛಂದ: ಧರೆಯೊಳಜ್ಞಾನವನು ತೊಲಗಿಸಿ ಜ್ಞಾನಸೂರ್ಯನ ತೋರಿದ
ಗುರುವರನು ತಾ  ಸಾಂಪ್ರದಾಯಕ್ಕನುಗುಣದಿಸಲೆ ನಟಿಸಿದ
ಗುರುಗಳನ್ನು ಶೋಧಿಸಿಯವರ ಬಹು ಸೇವೆಯಿಂ ಘೋಷಿಸಿದನು!
ವರಸ್ವರೂಪಜ್ಞಾನ ಪಡೆದು ಮುಮುಕ್ಷುಗಳಿಗನುವಾದನು...

ಯಾವ ನಿನ್ನಯ ದರ್ಶನೇಚ್ಛೆಯಿಂದ ದೇವಾದಿಕರು ದಾರುಣವಾದ ತಪಸ್ಸು ಮಾಡುವರು, ಮತ್ತು ಯಾವ ಚರಣ ತೀರ್ಥವು ತ್ರೈಲೋಕ್ಯ ಪಾವನವಾಗಿರುವದು, ಅಂಥಾ ದಯಾಘನನಾದ ಸಿದ್ಧರಾಜನೇ ನೀನಿರುವಿ. ಲೋಕದಲ್ಲಿ ಶಿಷ್ಯ ಸಂಪ್ರದಾಯವನ್ನು ಉಪದೇಶಿಸಬೇಕು ಎಂದು ನೀನು, ಪೂರ್ಣ ಜ್ಞಾನಮಯನಾಗಿದ್ದರೂ, ಗುರುಶೋಧನದ್ಧಶೆಯಿಂದ ಹೊರಟಿರುವಿ. ಇರಲಿ, ಈಗ ಕಥಾನುಸಂಧಾನವೇನೆಂದರೆ, ಸಿದ್ಧನು ಏಕಾಕಿಯಾಗಿ ಹೊರಟು, ಎಲ್ಲೆಲ್ಲಿ ಸಾಧು ಮಹಾತ್ಮರು ಇದ್ದಾರೆ ಎಂದು ಜನರನ್ನು ಕುರಿತು ವಿಚಾರಿಸುತ್ತಾ, ಅಲ್ಲಲ್ಲಿ ಮಹಾಪುರುಷರ ದರ್ಶನ ತಗೊಳ್ಳುತ್ತ, ಯಾರಿಂದಲೂ ಮನಸ್ಸಿಗೆ ಸಮಾಧಾನವಾಗದೆ, ಸದ್ಗುರುನಾಥನನ್ನು ಹುಡುಕುತ್ತ ಹೈದರಾಬಾದ, ಗೋವಕೊಂಡ ನೋಡಿ, ತಿಮರಲಂಕನ ಭವ್ಯ ಗುಹೆಯನ್ನು ಕಂಡು ಅದರೊಳಗೆ ಹೋಗಿ ಕುಳಿತುಕೊಂಡನು . ಅಲ್ಲಿ ಧ್ಯಾನ ಮಾಡುತ್ತ ಬಹು ದಿವಸ ಕ್ರಮಿಸಿ ಚಿತ್ತೈಕಾಗ್ರತೆ ಪ್ರಸಾದದಿಂದ, ಸದ್ಗುರುವು ದಕ್ಷಿಣ ದೇಶದಲ್ಲಿ ದಕ್ಷಿಣಾಮೂರ್ತಿ ಸಾಂಪ್ರದಾಯಿಕನಿರುವನೆಂದು

ತಿಳಿಯಿತು. ಅಲ್ಲೇ ತನಗೆ ಗುರುಪ್ರಾಪ್ತಿಯಾಗುವದೆಂದು ಚಿತ್ತದಲ್ಲಿ ತಿಳಿದು, ಆ ಸ್ಥಾನ ಬಿಟ್ಟು ಹೊರಟು, ಶ್ರೀಶೈಲ ಕ್ಷೇತ್ರಕ್ಕೆ ತೆರಳಿದನು. ಅಲ್ಲಿ ಸೂರ್ಯ ಸಿಂಹಾಸನಸ್ಥ ಮಠಾಧಿಕಾರಿಯಾದ ಸ್ವಾಮಿಗಳಿಗೆ ನಮಸ್ಕರಿಸಿ, ಜ್ಞಾನ ಸಾಧನವನ್ನು, ಚಿತ್ತಶುದ್ಧಿ ಹ್ಯಾಗಾಗಬೇಕೆಂಬುದನ್ನೂ, ವಿಚಾರಿಸಿದನು. ಆ ಪ್ರಸಂಗದಲ್ಲಿ ಇಬ್ಬರಿಗೂ ಬಹಳ ಹೊತ್ತು ಸಂವಾದ ನಡೆಯಿತು. ಆಮೇಲೆ ಸ್ವಾಮಿಯವರು ಮನಸ್ಸಿನಲ್ಲಿ ವಿಚಾರಿಸುತ್ತಾರೆ, ಈ ಬಾಲಕನು ಬಹು ಜನ್ಮಗಳಿಂದ ಯೋಗ ಸಾಧನದಲ್ಲಿ ಪ್ರವರ್ತಿಸುತ್ತಿರುವಂತೆ ತೋರುತ್ತದೆ. ಆ ಸಂಸ್ಕಾರದಿಂದ ಈ ಜನ್ಮದಲ್ಲಿ ಬಾಲ್ಯತ್ವದಿಂದಲೇ ಜ್ಞಾನ ಸಾಧನದಲ್ಲಿ ಪ್ರವರ್ತಿಸಿರುವನು, ಹಾಗಲ್ಲದಿದ್ದರೆ, ಈತನು ದೇವಾಂಶವಿರುವನು, ಹೇಗೆ ತಿಳಿದುಕೊಂಡು ಸಿದ್ಧಮುನಿಯನ್ನು ಬಹು ಆದರದಿಂದ ಪೂಜಿಸಿದರು. ಅಲ್ಲಿ ಪೂಜೆಯನ್ನು ಸ್ವೀಕರಿಸಿ, ಸಿದ್ಧನು ಮುಂದಕ್ಕೆ ಹೊರಟನು.

ಗುರುವು ಬ್ರಹ್ಮವೇತ್ತನೂ, ವೇದವೇದಾಂತ ಪಾರಂಗತನೂ ಇದ್ದು ಉಪನಿಷದರ್ಥವನ್ನು ಮುಮುಕ್ಷುಗಳಿಗೆ ಸ್ಪಷ್ಟವಾಗಿ

ತಿಳಿಸಬಲ್ಲವನಾಗಬೇಕು, ಎಂದು ಹೀಗೆ ಮನಸ್ಸಿನಲ್ಲಿ ಅಂದುಕೊಳ್ಳುತ್ತ, ಸಿದ್ಧನು ರಾಚೋಟಿ ಸ್ಥಾನದಲ್ಲಿ ಸಂಚರಿಸುತ್ತ, ವೀರಭದ್ರಾದಿ ನವನಂದಿಗಳನ್ನು ನೋಡಿಕೊಳ್ಳುತ್ತ ದಕ್ಷಿಣ ದಿಕ್ಕಿಗೆ ಹೊರಟು ಹೋದನು. ಪ್ರಾಪ್ತವಾದ ಶರೀರ ದುಃಖಗಳನ್ನು ಮನಸ್ಸಿಗೆ ಹತ್ತಗೊಡದೆ, ಅನ್ನದಿಗಳ ವರ್ಜನೆಯಿಂದ ದೇಹವನ್ನು ದಂಡಿಸುತ್ತಿರುವನು. ಇದರಿಂದ ಸರ್ವ ವಾಸನಾ ಸತ್ಯಾಗವಾಗಿ ಚಿತ್ತ ಶುದ್ಧಿಯು ಸಹಜವಾಗಿ ಘಟಿಸಿತು. ಹೃದಯದಲ್ಲಿ ಸದ್ಗುರುವನ್ನು ಅಖಂಡವಾಗಿ ಧ್ಯಾನಿಸುತ್ತ, ಕ್ಷೇತ್ರಗಳನ್ನು ನೋಡುತ್ತ ನೋಡುತ್ತ ಹೋಗುತ್ತಿರುವಾಗ ಯಾವ ಸದ್ಗುರುವಿನ ಕೃಪೆಯಿಂದ ಸರ್ವಮಾಯಾ ನಿರಸನವಾಗುವದೋ ಮತ್ತು ಸತ್ಯವಾದ ಬ್ರಹ್ಮವು ಪ್ರಕಾಶಿಸುವುದೋ, ಆತನ ದರ್ಶನದ್ದೆಶೆಯಿಂದ ಮನಸ್ಸಿನಲ್ಲಿ ಬಹು ತಳಮಳಿಸುತ್ತಿದ್ದನು. ಬಹು ತಾಪದಿಂದ ಸಿದ್ಧನೆನ್ನುತ್ತಾನೆ, “ಸದ್ಗುರು ಯಾಕೆ ದರ್ಶನ ತೋರುವುದಿಲ್ಲ. ಹೇ, ಸದ್ಗುರುನಾಥಾ, ಈ ಬಾಲಕನಮೇಲೆ ಕೃಪಾಮಾಡಿ, ನಿನ್ನ ಸಗುಣ ರೂಪವನ್ನು ಕಣ್ಣಿಗೆ ತೋರಿಸುವವನಾಗು." ಹೀಗೆ

ಕಳವಳಿಸಿ, ಮೂರ್ಛೆ ಬಂದು ಭೂಮಿಗೆ ಬಿದ್ದನು. ಆಗ ಅಂತರದಲ್ಲಿ ಸದ್ಗುರುವು ಬಂದು ತನ್ನನ್ನು ಆಲಂಗಿಸಿ - "ಬಾಲಾ ನೀನು ಧೈರ್ಯವನ್ನು ಬಿಡಬೇಡ" ಎಂದು ಆಶ್ವಾಸನೆ ಕೊಟ್ಟಂತೆ ಆಯಿತು. ಸಿದ್ಧನು ಕಣ್ಣು ತೆರೆದು ನೋಡಲು, ಯಾರೊಬ್ಬರನ್ನೂ ಕಾಣದೆ, ಮರಳಿ ಭೂಮಿಗೆ ಬಿದ್ದು, "ಹೇ ದಯಾಳು ಗುರುಮಾತೆಯೇ, ನನ್ನ ಅಂತಸ್ತನ್ನು ಎಷ್ಟೆಂದು ನೋಡುವಿ; ನಿನ್ನ ಮುದ್ದು ಮಗುವಾದ ನನ್ನ ಕಣ್ಣಿಗೆ ತಪ್ಪಿಸಿ ಎಲ್ಲಿ ಅಡಗಿದ್ದಿ, ತೀವ್ರವಾಗಿ ಬಂದು ನನಗೆ ದರ್ಶನವನ್ನು ಕೊಡು. ನಿನ್ನ ಚರಣಗಳನ್ನು ಕಾಣುವ ಆಶೆಯಿಂದ ಹಗಲು ರಾತ್ರಿ ನಾನು ವ್ಯಾಕುಲ ಚಿತ್ತನಾಗಿದ್ದೇನೆ. ಅನೇಕ ದೇಶಗಳನ್ನು ನಿನ್ನ ದಶಯಿಂದ ಸಂಚರಿಸಿದೆನು. ಇನ್ನಾದರೂ ನನ್ನ ಮೇಲೆ ದಯೆಯುಳ್ಳವನಾಗಿ ಬೇಗನೇ ಬಂದು ದರ್ಶನ ಕೊಡುವಂಥವನಾಗು. ನನ್ನ ಮಾಯಾಭಾಸವನ್ನು ನಿರಸನ ಮಾಡಿ ಬ್ರಹ್ಮಪಂಥವನ್ನು ತೋರಿಸು, ನಿನ್ನ ಹೊರ್ತು ಅನ್ಯ ರಕ್ಷಕನಿಲ್ಲವು, ಎಂದು ನಿನಗೇನೇ ಶರಣು ಬಂದಿರುವೆನು. ನೀನು ನನ್ನನ್ನು ಬಿಟ್ಟು ಹಾಕಿದಿಯೆಂದರೆ, ಹೇ ಸದ್ಗುರುನಾಥನೇ,

ಮತ್ಯಾರು ನನ್ನನ್ನು ಈ ಭವದಿಂದ ರಕ್ಷಿಸುವರು ? ನೀನು ಇಲ್ಲಿ ನನಗೆ ದರ್ಶನ ಕೊಡದಿದ್ದರೆ, ನಾನು ಇಲ್ಲಿಂದ ಮುಂದೆ ಹೋಗಲೊಲ್ಲೆನು. ನಿನ್ನ ಮೇಲೆಯೆ ಚಿತ್ತವನ್ನು ಇಟ್ಟು, ನಾನು ನಿಶ್ಚಯವಾಗಿ ಪ್ರಾಣವನ್ನು ತ್ಯಜಿಸುವೆನು," ಎಂದು ಈ ಪ್ರಕಾರ ಸಿದ್ಧನು ಅನ್ನುತ್ತಿರುವಾಗ, ಎರಡೂ ನೇತ್ರಗಳಿಂದ ದಳದಳನೇ ನೀರು ಸುರಿಯಹತ್ತಿದವು. ಸಿದ್ಧನು ಕಣ್ಣುಮುಚ್ಚಿಕೊಂಡು ಸ್ವಸ್ಥ ಇರಲು, ಆ ದಯಾಳನು ಅವರ ಕರುಣಾವಚನವನ್ನು ಕೇಳಿ ಧಾವಿಸಿ ಬಂದರು. ಒಬ್ಬ ವೃದ್ಧ ಸಾಧು ವೇಷವನ್ನು ತೊಟ್ಟು, ಸಿದ್ಧನ ಸಮೀಪ ಬಂದು ನಿಂತು, ಆ ದೀನದಯಾಳುವಾದ ಸದ್ಗುರುನಾಥನು, ಆತನ ಕೈಹಿಡಿದು ಎಬ್ಬಿಸಿ, "ಹೇ ಬಾಳಾ, ನೀನು ಯಾವಾತನಿರುವಿ?" ಎಂದು ಕೇಳಿದನು. ಅದನ್ನು ಕೇಳಿ ಸಿದ್ಧನ ಕಣ್ಣು ತೆರೆದು ವೃದ್ಧರನ್ನು ಕಂಡು, "ಹೇ ತಾತಾ, ಆ ಸದ್ಗುರುರಾಜನು ಎಷ್ಟು ಹುಡುಕಿದರೂ ನನಗೆ ಸಿಗಲಿಲ್ಲ. ಹೇ ದೀನಬಂಧುವೇ, ನಿನಗೆ ನಾನು ಶರಣು ಬಂದಿರುತ್ತೇನೆ, ಶೀಘ್ರವಾಗಿ ಆತನನ್ನು ನನಗೆ ತೋರಿಸುವವನಾಗು. ಇಲ್ಲದಿದ್ದರೆ ನನ್ನ ಪ್ರಾಣ ಹೋಗುವದು," ಎಂದು ಅಂದನು.

ಇದನ್ನು ಕೇಳಿದ ಸದ್ಗುರುನಾಥನು ಸದ್ಗದಿತನಾಗಿ, "ಎಲೈ ಬಾಲಕನೇ, ನೀನು ಧನ್ಯನು. ಧನ್ಯನು. ನೀನೇ ಸದ್ಗುರುನಾಥನನ್ನು ವಶಮಾಡಿಕೊಂಡಿ. ಲೋಕದಲ್ಲಿ ಜನರು ವಿಷಯಗಳನ್ನು ಇಚ್ಛೆಸುತ್ತಿರುವಾಗ ನೀನು ಸದ್ಗುರುನಾಥನನ್ನು ಶೋಧಿಸುತ್ತಿ, ಆತನು ನಿನಗೆ ಶೀಘ್ರವಾಗಿ ಭೆಟ್ಟಿಯಾಗುವನು. ಹಾಗಾದರೆ ನೀನು ಈಗಲೇ ಗುಡಗಂಟೆಯಲ್ಲಿರುವ ಅಮರ ಗುಂಡ ಮಲ್ಲಿಕಾರ್ಜುನ ಕ್ಷೇತ್ರಸ್ಥ ಕಟ್ಟಿ ಮಠದ ಪಟ್ಟದ ಸ್ವಾಮಿಗಳಲ್ಲಿಗೆ ಹೋಗು. ಗಜದಂಡವೆಂಬ ನಾಮಾಭಿದಾನವುಳ್ಳ ಅವರು ವೇದಗಳ ಕರ್ಮ ಉಪಾಸನಾ ಜ್ಞಾನ ಇವೇ ಮೂರು ಕಾಂಡಗಳನ್ನು ವಿಧವತ್ ಅಧೀತರಾಗಿರುವರು. ಅವರ ವಿದ್ಯಾ ಮತ್ತು ಜ್ಞಾನವು ಸರ್ವೋತ್ಕೃಷ್ಟವಾಗಿರುವುದೆಂದು ಜನರೆನ್ನುವರು.ಅವರ ಶುಶ್ರೂಷಣೆ ಮಾಡಿದ್ದಾದರೆ ನೀನು ನಿಶ್ಚಯವಾಗಿದ್ದ ಆತ್ಮ ಜ್ಞಾನವನ್ನು ಹೊಂದುವಿ. ಆ ಸ್ಥಾನವು ಇಲ್ಲೇ ಸಮೀಪವಿದೆ. ಇಗೋ ಆ ಗುಡ್ಡದ ಕೆಳಗಿರುವದು," ಎಂದು ಬೆರಳು ತೋರಿಸಿ, ಆ ವೃದ್ಧರೂಪದಿಂದ ಬಂದ ಗುರುನಾಥನು ಅದೃಶ್ಯನಾದನು.

ಸಿದ್ಧನಿಗಾದರೋ ನಡದದ್ದೆಲ್ಲ ಸ್ವಪ್ನವತ್ ಭಾಸಿಸಿತು. ಆತನು ಅನ್ನುತ್ತಾನೆ - “ನನಗೆ ಭೆಟ್ಟಿಯಾದವನು ಸದ್ಗುರುನಾಥನೇ ಇರುವನು. ಆದರೆ ಮಾಯಾಮೋಹದಿಂದ ನನಗೆ ತಿಳಿಯದೆ ಹೋಯಿತು. ನಮನ ಸಹಾ ಮಾಡದೆ ಹೋದೆನು. ಆದರೂ ಇದೇ ಗುರುಆಜ್ಞೆಯೆಂದು ಮನ್ನಿಸಿ, ಆಸ್ಥಾನಕ್ಕೆ ನಾನು ಹೋಗಿ ಗಜದಂಡ ಗುರುಗಳಿಗೆ ಬೆಟ್ಟಿಯಾಗಿ ಸೇವೆಯ ಯಾಚನೆ ಮಾಡಬೇಕು. ಹೀಗಂದುಕೊಂಡು ಅದೇ ದಿವಸ ಗುಡಗುಂಟಿ ಹೋಗಿ, ದೇವಾಲಯದ ದ್ವಾರದಲ್ಲಿ ಹೊರಗೆ ಸ್ವಾಮಿಗಳ ದಾರಿ ನೋಡುತ್ತ ನಿಂತುಕೊಂಡನು.ಲಿಂಗಪೂಜೆಯಾದ ತರುವಾಯ ಗಜದಂಡಸ್ವಾಮಿಗಳು ಹೊರಗೆ ಬಂದರು. ಕೂಡಲೇ ಸಿದ್ಧನು ನೆಲಕ್ಕೆ ಬಿದ್ದು ಸಾಷ್ಟಾಂಗ ನಮಸ್ಕಾರ ಮಾಡಿ, ಎದ್ದುನಿಂತು ಅಂಜಲಿಬದ್ಧನಾಗಿ, ಅತ್ಯಂತ ದೈನ್ಯಭಾವದಿಂದ ಪ್ರಾರ್ಥಿಸುತ್ತಾನೆ- "ಹೇ ಸದ್ಗುರುವೇ, ನೀನು ಬ್ರಹ್ಮಾನಂದ ಮೂರ್ತಿಯು, ಸರ್ವರಿಗೂ ಸುಖದಾಯಕನಾಗಿದ್ದಿ, ನೀನು ಅಖಂಡ ಜ್ಞಾನರೂಪನಾಗಿದ್ದು ದ್ವಂದ್ವಾತೀತನಿರುವಿ. ನಿನ್ನ ರೂಪವು ಆಕಾಶದಂತೆ ಪೂರ್ಣವೂ ಸರ್ವವ್ಯಾಪಿಯೂ ಆಗಿದ್ದು

ನಿನ್ನಲ್ಲಿ ಪ್ರಪಂಚವು ಅತ್ಯಂತ ಲೋಪವಾಗಿರುವದು. ನೀನು ಏಕರೂಪನಾಗಿ ಅಖಂಡ ಸಚ್ಚಿತ್ ಸ್ವರೂಪನಾಗಿದ್ದಿ: ಅಂತಃಕರಣದಲ್ಲಿ ಸಾಕ್ಷಿಯಾಗಿದ್ದು, ಸರ್ವ ಭೂತಗಳಲ್ಲಿ ನೀನು ಅಂತರ್ಯಾಮಿಯಾಗಿರುತ್ತಿ. ನೀನು ಮನಬುದ್ಧಿಗೆ ಅತೀತನಾಗಿದ್ದು ತ್ರಿಗುಣಗಳು ನಿನಗೆ ಹತ್ತುವುದಿಲ್ಲ. ಈ ಪ್ರಕಾರ, ಹೇ ಸದ್ಗುರುನಾಥಾ, ನಿನ್ನ ಸ್ವರೂಪ ಇದ್ದರೂ, ನೀನು ಈಗ ಸಗುಣರೂಪವನ್ನು ತೊಟ್ಟು, ಜೀವರಿಗೆ ಜ್ಞಾನದಾತನಾಗಿ ಅವರ ಉದ್ದಾರವನ್ನು ಮಾಡುವಿ. ನಾನು ಮಾಯೆಯಿಂದ ಬಹಳ ಕಾಡಿಸಿಕೊಂಡು ನಿನಗೀಗ ಶರಣು ಬಂದಿರುವೆನು. ನಿನ್ನಿಂದ ಉಧೃತನಾಗದಿದ್ದರೆ, ನಾನು ಸಂಸಾರದಲ್ಲಿ ಬಿದ್ದು ವ್ಯರ್ಥವಾಗಿ ನಾಶವಾಗುತ್ತೇನೆ. ಆದ್ದರಿಂದ, ನನ್ನ ಪ್ರಪಂಚಭ್ರಾಂತಿ ಸಮೂಳ ಹೋಗಿ, ನಾನು ಉದ್ಧಾರವಾಗುವಂತೆ ಉಪಾಯವನ್ನು ಮಾಡುವವನಾಗು."
ಈ ಪ್ರಕಾರ ಕರುಣಾವಚನದಿಂದ ಯುಕ್ತವಾದ ಪ್ರಾರ್ಥನೆಯನ್ನು ಕೇಳಿ, ಗುರುಗಳು ಕಳವಳಗೊಂಡರೂ, ಸಿದ್ಧನ ಶ್ರದ್ಧಾ ಭಕ್ತಿಗಳನ್ನು ಪರೀಕ್ಷಿಸುವ ದೆಶೆಯಿಂದ,

ಬಾಹ್ಯಾತ್ಕಾರದಿಂದ ಅವನ ಕಡೆಗೆ ನೋಡದೆ, ಅತ್ತಸರಿ" ಅಂದು ಉದಾಸೀನ ಮಾಡಿ, ಬಿಟ್ಟುಹೋದರು. ಇದರಿಂದ ಸಿದ್ದನು ಖಿನ್ನ ಮನಸ್ಕನಾಗದೆ, ಸದ್ಗುರುಗಳ ಮಠಕ್ಕೆ ಹೋಗಿ, ಅತ್ಯಂತ ನಿರಭಿಮಾನದಿಂದ ಗುರುಸೇವೆಯನ್ನು ಮಾಡತೊಡಗಿದನು. ಆತನು ನಿತ್ಯದಲ್ಲಿ ಗುರುವಿನ ಕುದುರೆ ಲಾಯವನ್ನು ಸ್ವಚ್ಛ ಮಾಡುತ್ತ, ಲದ್ದಿಯನ್ನು ತಾನೇ ಸ್ವಹಸ್ತದಿಂದ ಬಳಿಯುವನು. ಮಠದ ಅಂಗಳದಲ್ಲಿ ಸಮ್ಮಾರ್ಜನೆ ಮಾಡಿ, ಕಸ ಹೊಡೆದು ಶುಚಿ ಮಾಡುವನು. ಗುರುಗಳ ಸ್ನಾನದ್ದೆಶೆಯಿಂದ ನೀರು ತರುವದು, ಅಡಿಗೆಗೋಸ್ಕರ ನಿತ್ಯ ಕಟ್ಟಿಗೆ ತಂದು ಹಾಕುವದು, ಆಡಿಗೆಯ ಊಟದ ಮುಂತಾದ ಪಾತ್ರೆಗಳನ್ನು ತಕ್ಕೊಂಡು, ಅವುಗಳೊಳಗೆ ಸಿಕ್ಕ ಉಚ್ಛಿಷ್ಟವನ್ನು ಸೇವಿಸಿ, ಅವನ್ನು ಬೆಳಗಿಕೊಂಡು ಬರುವುದು, ಗುರುಗೃಹದೊಳಗಿನ ವಸ್ತುಗಳನ್ನು ಸ್ವಚ್ಛವಾಗಿ ಒಗೆಯುವುದು, ಇವೇ ಮುಂತಾದ ಸೇವೆಗಳನ್ನು ಗುರುವಿನ ಕಾರಣ ಮಾಡುವುದಲ್ಲದೆ ಅವರ ಶಿಷ್ಯರ ಸೇವಾಕಾರ್ಯಗಳನ್ನು ಸಹ ಬಹು ಆದರದಿಂದ ಸಿದ್ಧನು

ಗೈಯುತ್ತಿದ್ದನು. ಗುರುಗಳನ್ನು ಎಲ್ಲಾದರೂ ಅಕಸ್ಮಾತ್ತಾಗಿ ಕಂಡರೆ, ಎದ್ದು ಸಾಷ್ಟಾಂಗ ನಮಸ್ಕಾರ ಮಾಡುವನು ಮತ್ತು ವಿನೀತ ಭಾವದಿಂದ ತಲೆಬಾಗಿಸಿ ಕೈಜೋಡಿಸಿ ನಿಲ್ಲುವನು. ಮಧ್ಯಾಹ್ನ ಕಾಲವಾದ ಮೇಲೆ ನಿತ್ಯ ಗ್ರಾಮದೊಳಗೆ ಹೋಗಿ, ಭಿಕ್ಷೆಯಿಂದ ಸಿಕ್ಕಿದ ಅನ್ನವನ್ನೇ ಉಣ್ಣುತ್ತಿರಬೇಕು. ಆದರೆ ಗುರುಗೃಹದಲ್ಲಿ ಅನ್ನವನ್ನು ಯಾರಾದರೂ ಕೊಟ್ಟರೂ ಸೇವಿಸುತ್ತಿದ್ದಿಲ್ಲ. ದೇಹ ಸುಖದ ಕಡೆ ತಿಲಮಾತ್ರ ಲಕ್ಷ್ಯವಿದ್ದಿಲ್ಲ. ಅನ್ನವಸ್ತ್ರದ ಚಿಂತೆ ಮೊದಲೇ ಬಿಟ್ಟು ಇದ್ದು, ಯಾರಾದರೂ ದಯಾಳುಗಳು ಕೊಟ್ಟರೂ ವಸ್ತ್ರಗಳನ್ನು ಪರಿಗ್ರಹಿಸುತ್ತಿದ್ದಿಲ್ಲ. ನಿತ್ಯದಲ್ಲಿಯೂ ಮಠದಲ್ಲಿ ಗುರುಗಳು ಶಾಸ್ತ್ರವನ್ನು ಹೇಳುತ್ತಿರುವಾಗ, ಸಿದ್ಧನು ಬಹು ಆದರದಿಂದ ಶ್ರವಣ ಮಾಡುತ್ತಿದ್ದನು.

ಒಂದು ದಿನ ಗಜದಂಡ ಸ್ವಾಮಿಯವರ ಸಭೆಗೆ ಸಕಲ ಶಾಸ್ತ್ರಗಳಲ್ಲಿ ನಿಪುಣನಾದವ ಸುಬ್ಬಯ್ಯಶಾಸ್ತ್ರಿ ಎಂಬ ಒಬ್ಬ ಬ್ರಾಹ್ಮಣ ಪಂಡಿತನು ಪ್ರಾಪ್ತನಾಗಿ, ಸಭಿಕರನ್ನು ಕುರಿತು "ಉಪನಿಷತ್" ಈ ಶಬ್ದಕ್ಕೆ ಅರ್ಥ ಮಾಡುವವರೇ ಈ

ಧರಣಿಯೊಳಗೆ ಯಾರೂ ಇಲ್ಲ. ಹೀಗಿರುತ್ತಾ ಅದನ್ನು ಪರಿಸುವುದಕ್ಕೆ ಅಧಿಕಾರಿ ಯಾರಿರಬೇಕು !" ಎಂದು ನುಡಿದದ್ದನ್ನು ಕೇಳಿ, ಸಭಾಸದರೆಲ್ಲ ಚಕಿತರಾದರು. ಸ್ವಾಮಿಗಳು ಈ ವಾಕ್ಯವನ್ನು ಕೇಳಿ, ಈತನು ವಿದ್ಯೆಯಿಂದ ಉನ್ಮತ್ತನಾಗಿರುವನು; ಇವನ ಗರ್ವ ಹರಣ ಮಾಡಬೇಕೆಂದು ಆಲೋಚಿಸಿದರು. ಅಷ್ಟರಲ್ಲಿ ಸಿದ್ಧನಾಥನು ಎದ್ದುಬಂದು, ವಿನೀತ ಭಾವದಿಂದ ಸದ್ಗುರುಗಳ ಮುಂದೆ ಕೈಜೋಡಿಸಿ ನಿಂತು, "ಹೇ ಮಹಾಸ್ವಾಮೀ, ನನ್ನ ವಿನಂತಿಯನ್ನು ಪರಾಮರ್ಶಿಸಬೇಕು. ನನಗೆ ತಾವು ಆಜ್ಞೆಯನ್ನು ಕೊಟ್ಟಿದ್ದಾದರೆ, ಈ ಶಾಸ್ತ್ರೀಯು ನುಡಿದ ವಚನವನ್ನು ನಾನು ಖಂಡನ ಮಾಡುವೆನು," ಎಂದು ಹೇಳಿದ್ದು ಕೇಳಿ ಗುರುಗಳು ಸಿದ್ಧನಿಗೆ ಆಜ್ಞೆಯನ್ನು ಕೊಟ್ಟರು. ಆಗ ಸಿದ್ಧನು ಶಾಸ್ತ್ರಿಯನ್ನು ಕುರಿತು, "ಉಪನಿಷತ್ ಶಬ್ದದಿಂದ ಬ್ರಹ್ಮಾತ್ಮರುಗಳಿಗೆ ಪೂರ್ಣ ಐಕ್ಯತೆಯು ಹೇಳಲ್ಪಡುತ್ತದೆ. ಇದಕ್ಕೆ ಬ್ರಹ್ಮವಿದ್ಯೆಯೆಂದು ಅನ್ನುವರು. ಯಾಕಂದರೆ ಉಪನಿಷತ್ ವಾಕ್ಯಗಳಿಂದ ಅಂತಃಕರಣದಲ್ಲಿ ಐಕ್ಯಬೋಧ ಉಂಟಾಗುವುದು. ಆದ್ದರಿಂದ

ಉಪನಿಷದ್ವಾಣಿಯು ಬ್ರಹ್ಮವಿದ್ಯೆಯೆಂದು ಹೇಳಲ್ಪಟ್ಟಿತು".

ಎಂದು ಅಂದದ್ದು ಕೇಳಿ, ಶಾಸ್ತ್ರೀಯು, "ಉಪನಿಷತ್ತುಗಳಿಗೆ ವಿದ್ಯೆಯೆಂದು ಹ್ಯಾಗನ್ನಬೇಕು, "ಎಂದು ಕೇಳಿದ್ದಕ್ಕೆ ಸಿದ್ದನು, "ಉಪನಿಷತ್ತುಗಳೆ ಸತ್ಯವಾದ ವಿದ್ಯೆಯು, ಯಾಕೆಂದರೆ, ಮುಮುಕ್ಷಗಳು ಇಂದ್ರಿಯ ದಮನದಿಂದ ಶುದ್ಧ ಚಿತ್ತಯುಕ್ತರಾಗಿ ಗುರುಮುಖದಿಂದ ಉಪನಿಷದ್ವಾಕ್ಯಗಳನ್ನು ಶ್ರದ್ಧೆಯುಳ್ಳವರಾಗಿ ಕೇಳಿದಾಕ್ಷಣ ಅವರಿಗೆ ಆತ್ಮಜ್ಞಾನ ಪ್ರಕಾಶಿಸುತ್ತಿದೆ. ಇದರಿಂದ ಅವರ ಅವಿದ್ಯಾನಿರಸನವಾಗುವದು. ಆದ್ದರಿಂದ ಉಪನಿಷತ್ತುಗಳು ವಿದ್ಯಾ ಅನ್ನಲ್ಪಡುವವು.ಉಪನಿಷತ್ ಮತ್ತು ಜ್ಞಾನ ಶಬ್ದ, ಇವೆರಡಕ್ಕೂ ಒಂದೇ ಅರ್ಥವು, ಯಾಕಂದರೆ, ಜೀವನ ಅವಿದ್ಯಾನಿರಸನ ಮಾಡುವ ಎರಡರ ಪರಿಣಾಮವೂ ಒಂದೇ ಆಗಿರುತ್ತದೆ. ಸರ್ವ ಜೀವಿಗಳು ಜ್ಞಾನಕ್ಕೆ ಅಧಿಕಾರಿಗಳು. ಆದ್ದರಿಂದ ಉಪನಿಷತ್ ವಿಚಾರ ಮಾಡುವುದಕ್ಕೆ ಸರ್ವರೂ ಅಧಿಕಾರಿಗಳಾಗಿರುವರು," ಎಂದು ನುಡಿಯಲು, ಈ ಪ್ರೌಢತ್ವದ ಭಾಷಣವನ್ನು ಕುಮಾರನ ಮುಖದಿಂದ ಕೇಳಿ ಸುಬ್ಬಯ್ಯಶಾಸ್ತ್ರೀಯು ಚಕಿತನಾಗಿ

ಅಂದದ್ದು, “ಈ ಬಾಲಕನು ವಿದ್ಯಾಮೂರ್ತಿಯ ಧ್ಯಾನವನ್ನು ಬಹು ಜನ್ಮಗಳಿಂದ ಮಾಡಿರಬೇಕು, ಮತ್ತು ಈ ಬ್ರಹ್ಮಕಲೆಯು ಪೂರ್ವಜನ್ಮದಿಂದ ಬಂದಿರುವದು, ಇಲ್ಲದಿದ್ದರೆ ಈತನ ವಯಸ್ಸಿಗೆ ಇಂಥಾ ವಿದ್ಯಾಶಕ್ತಿಯು ದುರ್ಲಭವು " ಈ ಪ್ರಕಾರ ಅಂದು, ಬಹು ಆನಂದಭರಿತನಾಗಿ, ಸುಬ್ಬಯ್ಯಶಾಸ್ತ್ರಿಯು ಹೊರಟುಹೋಗಲು ಸಿದ್ಧನಾದರೂ ನಿರಭಿಮಾನದಿಂದ ತನ್ನ ಪೂರ್ವ ಸ್ಥಳಕ್ಕೆ ಬಂದು ಒಂದು ಮೂಲೆಗೆ ಹೋಗಿ ಕೂತನು. ಸಿದ್ಧನಾಥನ ಶಾಸ್ತ್ರವ್ಯುತ್ಪತ್ತಿ, ಆತನ ಅತ್ಯಂತ ನಿರಭಿಮಾನ ಸ್ಥಿತಿ ಮತ್ತು ಅನನ್ಯಭಾವದಿಂದ ಮಾಡಿದ ಸೇವಾ, ಭಕ್ತಿ ಎಲ್ಲಾ ಮನಸ್ಸಿಗೆ ತಂದು, ಗಜದಂಡ ಸದ್ಗುರುನಾಥನು ಬಹಳ ಆನಂದಪಟ್ಟನು.

ಅಂದಿನಿಂದ ಗಜದಂಡ ಸ್ವಾಮಿಯವರು ಶ್ರವಣಕಾಲದಲ್ಲಿ ಸಿದ್ಧನನ್ನು ನಿತ್ಯ ತಮ್ಮ ಸಮೀಪ ಕೂಡ್ರಿಸಿಕೊಂಡು ಮಹಾದ್ವಿಚಾರಗಳನ್ನು ಆತನಿಗೆ ಪ್ರೇಮದಿಂದ ಹೇಳುತ್ತಿದ್ದರು. ಒಂದು ದಿನ ಸಿದ್ಧನು ಗುರುಗಳನ್ನು ಕುರಿತು “ಗುರುಮಹಾರಾಜರೇ, ನನ್ನಗೆ ಸ್ವಲ್ಪ ದಯವಿಟ್ಟು ಇದನ್ನು

ಹೇಳಿರಿ. ಅದೇನೆಂದರೆ, ಷಟ್‌ಶಾಸ್ತ್ರಗಳ ಅರ್ಥ ನಿಶ್ಚಯವಾದ್ದರ ಚಿನ್ಹವೇನು ?ಎಂದು ಪ್ರಶ್ನೆ ಮಾಡಲು, ಸದ್ಗುರುಗಳು -"ಎಲೈ ಶಿಷ್ಯನೇ ಕೇಳು, ಷಟ್‌ಶಾಸ್ತ್ರಗಳ ಅರ್ಥವು ಸಾಧನದಿಂದ ನಿಶ್ಚಯವಾದವನ ಚಿನ್ಹ ಯಾವುದೆಂದರೆ - ಆತನಿಗೆ ಸಂಶಯ ವಿಪರೀತ ಭಾವನೆಗಳು ರಹಿತವಾದ ಬ್ರಹಾತ್ಮಭಾವವು ಪ್ರಾಪ್ತವಾಗುವದು," ಎಂದು ಉತ್ತರ ಕೊಡಲು, ಸಿದ್ಧನು - "ಅಹಂ ಆತ್ಮಾ ಈ ದ್ವೈತ ವಿದ್ಯೆಯಲ್ಲಿ ಐಕ್ಯತ್ವವು ಹ್ಯಾಗೆ ಘಟಿಸುವದು? " ಎಂದು ವಿನಯ ಭಾವದಿಂದ ಕೇಳಲು, ಗುರುಗಳಂದದ್ದು - "ಜೀವನಿಗೆ ದೇಹದಲ್ಲಿ ಎಲ್ಲಿ ತನಕ ಆತ್ಮಬುದ್ಧಿ ಇರುವದೋ ಅಲ್ಲಿ ತನಕ ದ್ವೈತದ ಭಾಸವಿರುವದು. ಯಾವಾಗ್ಗೆ ದೇಹಾಭಿಮಾನವು ನಿಃಶೇಷ ಹೋಗಿ, ಅನ್ಯ ದೇಹದಂತೆ ಸ್ವದೇಹವನ್ನು ಜೀವನು ನೋಡುವನೋ, ಆಗ ಇವೆರಡರ ಐಕ್ಯಜ್ಞಾನವು ಸಹಜವಾಗಿ ಆಗುವುದು. "ಆಗ ಸಿದ್ಧನು ಪುನಃ ಗುರುಗಳಿಗೆ ವಿಚಾರಿಸುತ್ತಾನೆ- "ಹೇ ಸದ್ಗುರುನಾಥನೆ, ಸರ್ವ ಪ್ರಪಂಚವು ನಮಗೆ ಪ್ರತ್ಯಕ್ಷವಾಗಿರುತ್ತೆ, ಇದೆಲ್ಲಾ ಮಿಥ್ಯೆಯೆಂದು ಹ್ಯಾಗಾನ್ನಬೇಕು

?" ಅದಕ್ಕೆ ಗುರುಗಳು ಹೇಳ್ತೈ ಶಿಷ್ಯನೇ ಈ ಪ್ರತ್ಯಕ್ಷ ಇಂದ್ರಿಯ ವ್ಯಾಪ್ತಿಯೋ, ವೃತ್ತಿವ್ಯಾಪ್ತಿಯೋ ಅಥವಾ ಚೈತನ್ಯವ್ಯಾಪ್ತಿಯೋ ? ಇಂದ್ರಿಯ ವ್ಯಾಪ್ತಿಯಂದರೆ, ಇಂದ್ರಿಯಗಳು ಜಡವಿದ್ದು ಜಡಭೂತಗಳಿಗೆ ವ್ಯಾಪಿಸಲಾರವು. ವೃತ್ತಿ ವ್ಯಾಪ್ತಿಯೆಂದರೆ ಜ್ಞಾನವಾಗುವದು ಅಸಂಭವವು. ಹ್ಯಾಗೆ ಘಟದ ಮೇಲೆ ಹಾಕಲ್ಪಟ್ಟ ವಸ್ತ್ರಕ್ಕೆ ಘಟಜ್ಞಾನವಾಗಲಾರದೋ ಹಾಗೆಯೇ ಘಟವನ್ನು ವ್ಯಾಪಿಸಿದಂಥಾ ಜಡವೃತ್ತಿಗೆ ಘಟಜ್ಞಾನವಾಗಲಾರದು. ಚೈತನ್ಯ ವ್ಯಾಪ್ತಿಯಿಂದ ಭೂತಗಳು ಪ್ರತ್ಯಕ್ಷವಾಗುತ್ತವೆ ಎಂದರೆ ವಿಷಯ ಮತ್ತು ವೃತ್ತಿಗತ ಚೈತನ್ಯ ಏಕವಿರುವದರಿಂದ, ಕೂಡಲೇ ಐಕ್ಯಜ್ಞಾನವು ಸಂಭವಿಸಬೇಕಾದೀತು. ಹಾಗಾಗುವುದಿಲ್ಲವಾದ್ದರಿಂದ ಚೈತನ್ಯವ್ಯಾಪ್ತಿಯೂ ಅಸಂಭವವು. ಹಾಗಾದರೆ ಪ್ರಪಂಚವು ಆಧ್ಯಾಸವೆಂದು ಹೇಳುವಿಯಾದರೆ, ಅಧ್ಯಾಸವೆಂಬುದು ಭ್ರಮೆ ಇದ್ದು ಮಿಥ್ಯವಾದ್ದರಿಂದ ಪ್ರಪಂಚವು ಸತ್ಯ ಹ್ಯಾಗಾಗುವದು ?" ಎಂದು ಕೇಳಿದ್ದಕ್ಕೆ ಸಿದ್ಧನು, "ವ್ಯಾಪ್ತಿ ವಿನಹಾ ಸಾಮಾನ್ಯತ್ವದಿಂದ ಜಗತ್ತು ಪ್ರತೀತಿಯಾಗುವದು ಅಂದರೇನು

?" ಎಂದು ಕೇಳಲು, ಗುರುಗಳು, "ಪ್ರತ್ಯಕ್ಷದಿಂದ ಪ್ರತ್ಯಕ್ಷ ಬಾಧಿಸಲ್ಪಡುವದು. ಹ್ಯಾಗೆ ಬಾಲ್ಯ ಪ್ರತ್ಯಕ್ಷ ಬಾಧಿತವಾಗಿ ಯೌವನ ಪ್ರತ್ಯಕ್ಷ ಬರುವುದು, ಹಾಗೆ ಉತ್ತರ ಪ್ರತ್ಯಕ್ಷ ಬರುತ್ತಲೇ ಪೂರ್ವ ಪ್ರತ್ಯಕ್ಷ ಬಾಧಿಸಲ್ಪಡುವದು," ಎಂದು ಉತ್ತರ ಕೊಟ್ಟರು. ಆಗ ಸಿದ್ದನು "ಗುರುಗಳೇ, ಕರ್ಮಕಾಂಡದಿಂದ ಲಿಂಗಗ್ರಹಣವಾಯಿತು. ಈಗ ಜ್ಞಾನಕಾಂಡದಿಂದ ಜ್ಞಾನವಾದ ಕೂಡಲೇ ಲಿಂಗಗ್ರಹಣ ವ್ಯರ್ಥವಾಯಿತು," ಹೀಗಂದು ಸಿದ್ಧನು ತನ್ನ ಕೊರಳೊಳಗಿನ ಲಿಂಗವನ್ನು ತೆಗೆದು, ಸದ್ಗುರುಗಳ ಪಾದದಲ್ಲಿಟ್ಟನು. ಇದನ್ನು ನೋಡಿ ಗುರುಗಳು,"ಸಿದ್ಧನೇ, ಇದು ಶಾಸ್ತ್ರವಿರುದ್ಧವಾಗುತ್ತದೆ," ಎಂದು ನುಡಿಯುವದು ಕೇಳಿ, ಸಿದ್ಧನು ಅಂದದ್ದು "ಸದ್ಗುರುಗಳೇ, ಚಿನ್ಮಯ ದೀಕ್ಷೆ ಸಿಕ್ಕಿದ ಮೇಲೆ ಶರೀರವು ಚೈತನ್ಯರೂಪವಾಯಿತು, ಎಂದು ಶಾಸ್ತ್ರದಲ್ಲಿ ಹೇಳುವುದು.

ಶ್ಲೋಕ -ಲಿಂಗಮದ್ಯೆ ಜಗತ್ಸರ್ವಂ ಸರ್ವಂ ಲಿಂಗಮಯಂ
ಜಗತ್ ಲಿಂಗ ಬಾಹ್ಯಾತ್ಪರಂ ನಾಸ್ತಿ

ತಸ್ಮಾ ಲಿಂಗಮಹಂ ಸದಾ ||1 | ಲಿಂಗದೊಳಗೆ ಸರ್ವ ಜಗತ್ತಿರುವದು, ಸರ್ವ ಜಗತ್ತು ಲಿಂಗಮಯವು, ಲಿಂಗದ ಹೊರಗೆ ಎರಡನೇದೇನೂ ಇಲ್ಲ. ಆದ್ದರಿಂದ ಸದಾ ನಾನು ಲಿಂಗವೇ ಇದ್ದೇನೆ, ಎಂಬ ಶಾಸ್ತ್ರಕ್ಕನುಸರಿಸಿ, ಸದ್ಯೋಃನಿರ್ವಾಣ ಭಾವವನ್ನು ಯಾವಾತನು ಹೊಂದಿರುವನೋಃ ಆತನಿಂದ ಜ್ಞಾನಕರ್ಮಗಳೆರಡೂ ಸಿದ್ಧಿಸಲಾರವು. ಇದೇಃ ಅರ್ಥದಿಂದ ಐತರೇಯ ಶ್ರುತಿಯ ಪ್ರಥಮ ಕಾಂಡದಲ್ಲಿ ಭಾಷ್ಯಾಕಾರರು ಅನುತ್ತಾರಲ್ಲ, ಯಥಾರ್ಥ ಜ್ಞಾನವು ಯಾವಾಗ್ಗೆ ಪ್ರಾಪ್ತಿಯಾಗುವದೋಃ ಆಗ್ಗೆ ಜ್ಞಾನಿಗೆ ಕರ್ಮದ ಸಮಾಪ್ತಿಯಾಗುವದು. ಯಾವಾತನಿಗೆ ಆತ್ಮಜ್ಞಾನವಾಗಿದೆಯೋಃ, ಆತನು ಅನಾಶ್ರಮಿ, ಅಗೋಃತ್ರ, ಅನಾವರಣ, ಅಕರ್ಮರೂಪ, ಆತ್ಮಾಕಾಶಾಂತಃಕರಣ ಮತ್ತು ಅದೇಹ, ಎಂದು ಕರ್ಮ ನಡಿಯದು.ಕರ್ಮಕ್ಕೆ ದೇಹಾಭಿಮಾನ ಬೇಕು, ಕರ್ಮಫಲದ ಅನುಸಂಧಾನ ಮತ್ತು ಕರ್ಮತ್ಯಾಗದ ಭೀತಿ ಇವಷ್ಟು ಬೇಕು. ಇವು ಮೂರು ಜ್ಞಾನಿಗೆ ಇಲ್ಲದ್ದರಿಂದ ಆತನಿಂದ ಕರ್ಮ ನಡಿಯದು.'" ಸಿದ್ಧಮುನಿಯ ಈ

ಭಾಷಣವನ್ನು ಕೇಳಿ ಈತನವೃತ್ತಿ ನಿರ್ಗುಣದಲ್ಲಿ ಅನನ್ಯವಾಗಿ ಆರೂಢವಾಗಿರುವದು, ಆದ್ದರಿಂದ ಈತನಿಗೆ ಸಿದ್ದಾರೂಢ ಎಂಬ ನಾಮವು ಶೋಭಿಸುವುದು ಎಂದು ತಿಳಿದು ಸಿದ್ಧನನ್ನು ಕುರಿತು ಗುರುಗಳು ಅನ್ನುತ್ತಾರೆ - "ಎಲೈ ಸಿದ್ಧಾರೂಢನೇ, ನೀನು ನನ್ನ ಸಮಾನಾನಿದ್ದಿಯೆಂದು ನಾನು ತಿಳಿಯುವೆನು. ನಿನಗೆ ಪ್ರಾಪ್ತವಾದ ಈ ಜ್ಞಾನವು ಶ್ರೀ ಮಲ್ಲಿಕಾರ್ಜುನನ ಪ್ರಸಾದದಿಂದ ನಿನ್ನ ಹೃದಯದಲ್ಲಿ ಪ್ರಕಾಶಮಾನವಾಗಲಿ ಮತ್ತು ನೀನು ಇದರಿಂದ ಮುಮುಕ್ಷು ಜನರನ್ನು ಉದ್ಧರಿಸುವಂಥವನಾಗು." ಗಜದಂಡ ಸದ್ಗುರುಗಳು ಹೀಗನ್ನುವಾಗ ಬಹು ಆನಂದದಿಂದ ಗದ್ಗದಿತರಾಗಿ ಪ್ರೇಮದಿಂದ ಸಿದ್ಧನನ್ನು ಅಪ್ಪಿಕೊಂಡರು.

ಸಿದ್ಧನು ಗದ್ಗದ ಕಂಠಯುಕ್ತನಾಗಿ, "ಹೇ ಸದ್ಗುರು ತಾತನೇ, ನನ್ನನ್ನು ಕೃತಾರ್ಥನನ್ನಾಗಿ ಮಾಡಿದಿ. ನಿನ್ನ ಕೃಪೆಯಿಂದ ನನ್ನ ಜೀವಕ್ಕೆ ಶಾಂತಿಯುಂಟಾಯಿತು.ನಿನ್ನ ಸಲುವಾಗಿ ಸಹಿಸಿದ ದುಃಖವೆಲ್ಲಾ ಇವತ್ತು ಸಾರ್ಥಕವಾಯಿತು. ನಿನ್ನ ದರ್ಶನ ಮಾತ್ರದಿಂದ ಅನೇಕ ಜನ್ಮಗಳ ಕಷ್ಟಗಳೆಲ್ಲಾ ಪರಿಹಾರವಾದವು," ಎಂದು ಶ್ರೀ ಸಿದ್ಧನಾಥನು

ಅನ್ನುತ್ತಿರುವಾಗ ನೇತ್ರದ್ವಯಗಳಿಂದ ಪ್ರೇಮಾಶ್ರುತಪಾತವಾಗುತ್ತಿದ್ದವು. ಪ್ರೇಮ ಭರದಿಂದ ಸದ್ಗುರುಗಳು ಆತನನ್ನು ಪುನಃ ಪುನಃ ಆಲಂಗಿಸಿದರು.

ಈ ಅಧ್ಯಾಯದಲ್ಲಿ ಶ್ರೀ ಸಿದ್ಧನಾಥನಿಗೆ ಸದ್ಗುರು ಉಪದೇಶವಾದದ್ದು ನಿರೂಪಿಸಲ್ಪಟ್ಟಿತು. ಈ ಕಥೆಯನ್ನು ಶ್ರವಣ ಮಾಡುವುದರಿಂದ ಮುಮುಕ್ಷು ಜನರು, ಸರ್ವ ಭವದ ನಾಶವಾಗಿ, ಸಹಜವಾಗಿ ಜ್ಞಾನವನ್ನು ಹೊಂದುವರು ಎಂಬಲ್ಲಿಗೆ ಶ್ರೀ ಸಿದ್ಧಾರೂಢ ಕಥಾಮೃತದೊಳ್, ಶ್ರವಣಮಾತ್ರದಿಂದ ಸರ್ವಪಾಪಗಳನ್ನು ಭಸ್ಮಮಾಡುವಂಥ ಈ ನಾಲ್ಕನೇ ಅಧ್ಯಾಯವನ್ನು ಶಿವದಾಸನು ಸದ್ಗುರು ಸಿದ್ಧಾರೂಢರ ಚರಣಾರವಿಂದಗಳಲ್ಲಿ ಅರ್ಪಿಸಿರುವನು.